☎ : 08135-275265
E-mail : pwdsira@gmail.com

ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ಲೋಕೋಪಯೋಗಿ ಇಲಾಖೆ, ಉಪ ವಿಭಾಗ,
ಶಿರಾ-572137

**ಕರ್ನಾಟಕ ಸರ್ಕಾರ**
**ಲೋಕೋಪಯೋಗಿ ಇಲಾಖೆ**

ಸಂಖ್ಯೆ: ಸಕಾಇ/ಲೋ.ಇ/ಉವಿ/ಶಿರಾ/ಸ.ಇಂ-02/ 144 /2025-26 ದಿನಾಂಕ: 16.06.2025

ರವರಿಗೆ
ಪ್ರಾಂಶುಪಾಲರು,
ಡೆಲ್ಲಿ ವರ್ಲ್ಡ್ ಶಾಲೆ,
ಹಳೆ ತಾಲ್ಲೂಕು ಕಛೇರಿ ಮುಂಭಾಗ,
ಶಿರಾ ನಗರ,
ಶಿರಾ ತಾಲ್ಲೂಕು-572137

ಮಾನ್ಯರೇ,

**ವಿಷಯ:-** ತುಮಕೂರು ಜಿಲ್ಲೆ, ಶಿರಾ ನಗರ ವ್ಯಾಪ್ತಿಯಲ್ಲಿ ಬರುವ ಡೆಲ್ಲಿ ವರ್ಲ್ಡ್ ಶಾಲೆ, ಹಳೆ ತಾಲ್ಲೂಕು ಕಛೇರಿ ಮುಂಭಾಗ, ಶಿರಾ ಕಟ್ಟಡದ ಸುಸ್ಥಿತಿಯ ಬಗ್ಗೆ ದೃಢೀಕರಣ ಪತ್ರ ನೀಡುವ ಬಗ್ಗೆ.

**ಉಲ್ಲೇಖ:-** 1) ಈ ಕಛೇರಿ ಪತ್ರಸಂಖ್ಯೆ: 833/2023-24 ದಿನಾಂಕ: 12-03-2024
2) ಪ್ರಾಂಶುಪಾಲರು, ಡೆಲ್ಲಿ ವರ್ಲ್ಡ್ ಶಾಲೆ, ಹಳೆ ತಾಲ್ಲೂಕು ಕಛೇರಿ ಮುಂಭಾಗ, ಶಿರಾ ನಗರ, ರವರ ಮನವಿ ಪತ್ರದ ದಿನಾಂಕ: 09-06-2025
3) ತಾಲ್ಲೂಕು ಆರೋಗ್ಯಾಧಿಕಾರಿಗಳು, ತಾಲ್ಲೂಕು ಆರೋಗ್ಯಾಧಿಕಾರಿಗಳ ಕಛೇರಿ, ಶಿರಾ ರವರ ಕಛೇರಿ ಪತ್ರದ ಸಂಖ್ಯೆ: ತಾ.ಆ.ಕ.ಶಿ:47/2025-26 ದಿ: 13-06-2025

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ ಪತ್ರ (2)ರಲ್ಲಿ ತುಮಕೂರು ಜಿಲ್ಲೆ ಶಿರಾ ನಗರ ವ್ಯಾಪ್ತಿಯಲ್ಲಿ ಬರುವ ಡೆಲ್ಲಿ ವರ್ಲ್ಡ್ ಶಾಲೆ, ಹಳೆ ತಾಲ್ಲೂಕು ಕಛೇರಿ ಮುಂಭಾಗ, ಶಾಲಾ ಕಟ್ಟಡವನ್ನು ಪರಿಶೀಲಿಸಿ ಕಟ್ಟಡ ಸುರಕ್ಷತೆ ಬಗ್ಗೆ ಧೃಡೀಕರಣ ಪತ್ರ ನೀಡಲು ಕೋರಿರುತ್ತೀರಿ.

ಅದರಂತೆ, ಸದರಿ ಕಟ್ಟಡವನ್ನು ದಿನಾಂಕ: 16-06-2025 ರಂದು ಪರಿಶೀಲಿಸಲಾಗಿದ್ದು, ಈ ಕಟ್ಟಡವು ಶಿರಾ ನಗರದ ಮುಖ್ಯ ರಸ್ತೆಯಲ್ಲಿ ಇರುತ್ತದೆ. ನಿವೇಶನದ ವಿಸ್ತೀರ್ಣ 6070.00 ಚ.ಮೀ ಇದ್ದು, ಕಟ್ಟಡದ ನೆಲಮಹಡಿ 815.00 ಚ.ಮೀ, ಮೊದಲನೇ ಮಹಡಿ 815.00, ಮತ್ತು 2ನೇ ಮಹಡಿ 815.00 ಚ.ಮೀ, 3ನೇ ಮಹಡಿ 815.00 ಚ.ಮೀ, ಹಾಗೂ 4ನೇ ಮಹಡಿ 815.00 ಚ.ಮೀ ಒಟ್ಟಾರೆ 4075.00 ಚ.ಮೀ ಇರುತ್ತದೆ. ಈ ಕಟ್ಟಡದಲ್ಲಿ 1 ರಿಂದ 9ನೇ ತರಗತಿಗಳನ್ನು ನಡೆಸುತ್ತಿದ್ದು, ಇದರಲ್ಲಿ ಒಟ್ಟಾರೆ 30 ಶಾಲಾ ಕೊಠಡಿ ಹಾಗೂ 3 ಶಿಕ್ಷಕರ ಕೊಠಡಿ, ಗ್ರಂಥಾಲಯ, ಆಡಳಿತ ಕಛೇರಿಗಳು ಇರುತ್ತವೆ. ಪ್ರತಿ ಮಹಡಿಯಲ್ಲಿ ಶೌಚಾಲಯ ವ್ಯವಸ್ಥೆ ಇರುತ್ತದೆ. ಕಟ್ಟಡದ ಪಕ್ಕದಲ್ಲಿಯೇ ಆಟದ ಮೈದಾನವಿರುತ್ತದೆ. ಕಟ್ಟಡದಲ್ಲಿ ಪ್ರಥಮ ಚಿಕಿತ್ಸೆ, ಅಗ್ನಿಶಾಮಕ ವ್ಯವಸ್ಥೆಯನ್ನು ಅಳವಡಿಸಲಾಗಿರುತ್ತದೆ.

ಸದರಿ ಕಟ್ಟಡವು ನೆಲಮಹಡಿ, 1 ರಿಂದ 4ನೇ ಮಹಡಿ ಇದ್ದು, ಮೇಲ್ಮಹಡಿಗಳಿಗೆ ಶಾಲಾ ಮಕ್ಕಳು ಹತ್ತಲು ಹಾಗೂ ಇಳಿಯಲು ಅನುಕೂಲವಾಗುವಂತೆ ಎನ್.ಬಿ.ಸಿ ಭಾರತ್ 2005 ರಂತೆ ಮೆಟ್ಟಿಲುಗಳನ್ನು ಅಳವಡಿಸಲಾಗಿದ್ದು, ನೆಲಮಹಡಿಯಿಂದ 4ನೇ ಮಹಡಿಯವರೆಗೆ ಓಡಾಡಲು ಲಿಫ್ಟ್‌ನ ವ್ಯವಸ್ಥೆಯನ್ನೂ ಸಹ ಕಲ್ಪಿಸಲಾಗಿರುತ್ತದೆ.

ಪು.ತಿ.ನೋ

Scanned with OKEN Scanner

ಸದರಿ ಕಟ್ಟಡವನ್ನು ಆರ್.ಸಿ.ಸಿ ಕಾಲಂ ಮತ್ತು ಸ್ಲ್ಯಾಬ್, ಇಟ್ಟಿಗೆ, ಕಲ್ಲುಕಟ್ಟಡಗಳಿಂದ ನಿರ್ಮಿಸಿದ್ದು, ಕಟ್ಟಡದ ಸ್ಟೆಬಿಲಿಟಿ ಬಗ್ಗೆ ಬೆಂಗಳೂರು ವಿಶ್ವವಿದ್ಯಾಲಯ, ಸಿವಿಲ್ ಇಂಜಿನಿಯರ್ ವಿಭಾಗ, UVCE ಬೆಂಗಳೂರು ರವರು Structural Stability Evaluation ಮಾಡಿರುತ್ತಾರೆ, ಈ ಶಾಲಾ ಕಟ್ಟಡವು ಸಾರ್ವಜನಿಕರಿಗೆ ಅನುಕೂಲವಾಗುವಂತೆ ಶಿರಾ ನಗರದ ವಸತಿ ಪ್ರದೇಶದಲ್ಲಿದ್ದು, ಶಾಲಾ ಮಕ್ಕಳಿಗೆ ಶಾಲೆಗೆ ಹೋಗಿ ಬರಲು ಹತ್ತಿರ ಪ್ರದೇಶವಾಗಿರುತ್ತದೆ. ಅಲ್ಲದೇ ರಾಷ್ಟ್ರೀಯ ಹೆದ್ದಾರಿ, ರೈಲ್ವೆ ಲೈನ್ ಹಾಗೂ ಭಾರ ಸಂಚಾರದಿಂದ ದೂರವಿರುತ್ತದೆ.

ಉಲ್ಲೇಖಿತ ಪತ್ರ (3)ರಲ್ಲಿ ತಾಲ್ಲೂಕು ಆರೋಗ್ಯಾಧಿಕಾರಿಗಳು, ಶಿರಾ ರವರು ಸದರಿ ಕಟ್ಟಡದಲ್ಲಿ ಸುರಕ್ಷತಾ ಮತ್ತು ಆರೋಗ್ಯ ದೃಷ್ಟಿಯಿಂದ ಕುಡಿಯುವ ನೀರಿನ ವ್ಯವಸ್ಥೆ ಉತ್ತಮವಾಗಿರುತ್ತದೆ. ನೈರ್ಮಲ್ಯ ಮತ್ತು ಆರೋಗ್ಯ ದೃಷ್ಟಿಯಿಂದ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಪ್ರತಿ ಮಹಡಿಯಲ್ಲಿರುತ್ತದೆ ಹಾಗೂ ಶಾಲಾ ಆವರಣ ಸ್ವಚ್ಛತೆಯಿಂದ ಇರುತ್ತದೆ. ಎಂಬುದಾಗಿ ನಿರಾಕ್ಷೇಪಣಾ ಪತ್ರವನ್ನು ಸಹ ನೀಡಿರುತ್ತಾರೆ. ಸದರಿ ಕಟ್ಟಡಕ್ಕೆ ಉಲ್ಲೇಖಿತ ಪತ್ರ (1) ರಲ್ಲಿ ಈಗಾಗಲೇ Structurally Stable ಇರುತ್ತದೆ ಎಂದು ನೀಡಲಾಗಿರುತ್ತದೆ. ಈ ಕಟ್ಟಡದ ಜಿ.ಪಿ.ಎಸ್ ಅಕ್ಷಾಂಶ: **13°44'49.6"N** ರೇಖಾಂಶ: **76°53'31.8"E** ಆಗಿರುತ್ತದೆ. ಮೇಲ್ಕಂಡ ವರದಿಗಳು ಹಾಗೂ ಕಟ್ಟಡವನ್ನು ಪರಿಶೀಲಿಸಿದಾಗ ಕಟ್ಟಡದಲ್ಲಿ ಯಾವುದೇ ನ್ಯೂನತೆಗಳು ಕಂಡು ಬಂದಿರುವುದಿಲ್ಲ. ಹಾಗೂ ಸದರಿ ಕಟ್ಟಡವನ್ನು 2021 ರಲ್ಲಿ ನಿರ್ಮಾಣ ಮಾಡಲಾಗಿದ್ದು. ಕಟ್ಟಡಕ್ಕೆ ಆಗಿಂದಾಗ್ಗೆ ಒಳ ಮತ್ತು ಹೊರಭಾಗದಲ್ಲಿ ಪೇಯಿಟಿಂಗ್‌ನ್ನು ನಿರ್ವಹಿಸಬೇಕೆಂಬ ಷರತ್ತಿನೊಂದಿಗೆ ಶಾಲಾ ಕಟ್ಟಡವು Structurally Stable ಇರುತ್ತದೆ ಎಂಬ ಅಂಶವನ್ನು ತಮ್ಮ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ. (ಈ ದೃಢೀಕರಣ ಪತ್ರವು 3 ವರ್ಷಗಳ ಅವಧಿಯವರೆಗೆ ಮಾತ್ರ ಅನ್ವಯವಾಗುತ್ತದೆ)

**ಅಡಕ:** ಎನ್.ಬಿ.ಸಿ ಚೆಕ್‌ಲಿಸ್ಟ್

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ, ಉಪ ವಿಭಾಗ ಶಿರಾ

Scanned with OKEN Scanner